(*d*) Does not arise in view of reply to question (*c*)
(*e*) Do do

ಶ್ರೀ ಎಫ್. ಎಸ್. ತಾವರೆ.—ಉಪಪ್ರಶ್ನೆಗಳೇನೂ ಇಲ್ಲ.

Repairs to tanks in Hosadurga Taluk.

*Q.—429. Sri G. T. RANGAPPA (Hosadurga).—

Will the Government be pleased to state :—

(*a*) whether they have received any representations from the public for the repairing of Devapura, Kodihalli, Menasinodu and Somanathapura tanks in Hosadurga Taluk ;

(*b*) if so, when ;

(*c*) the reasons for not taking any action so far on these representations ?

A.—Sri ALUR HANUMANTHAPPA (Deputy Minister for Minor Irrigation).—

(*a*) Yes (only for Devapura and Kodihalli tanks).
(*b*) Devapura tank—since 1964
Kodihalli tank—since 1947.
(*c*) Suitable action has been taken to redress the grievances of the petitioners.

ಶ್ರೀ ಜಿ. ಟಿ. ರಂಗಪ್ಪ.—ಸ್ವಾಮಿ, ಕೋಡಿಹಳ್ಳಿ ಕೆರೆಯ ಸಂಬಂಧದಲ್ಲಿ 1947ನೇ ಇಸವಿಯಿಂದಾಗಾಯ್ತು, ಸರ್ಕಾರಕ್ಕೆ ಮನವಿಗಳು ಬಂದರೂ ಕೂಡ ಆ ಕೆರೆಯ ದುರಸ್ತಿಯನ್ನು ಮಾಡುವುದಕ್ಕೆ ಸರ್ಕಾರದವರಿಗೆ ಇರುವ ತೊಂದರೆಯೇನು ?

ಶ್ರೀ ಆಲೂರು ಹನುಮಂತಪ್ಪ.—ಆ ಕೆರೆಯ ಎಸ್ಟಿಮೇಟ್‌ಮಾಡಿ, ಆ ಕೆಲಸವನ್ನು ಮಾಡುವುದಕ್ಕೆ ಕಂಟ್ರಾಕ್ಟರಿಗೆ ಕೊಟ್ಟಿತ್ತು. ಕಂಟ್ರಾಕ್ಟರು ಆ ಕೆಲಸವನ್ನು ಮಾಡುವಾಗ ಏರಿಯಲ್ಲಿ ಬಂಡೆ ಸಿಕ್ಕಿತು. ಅದಕ್ಕೋಸ್ಕರ ಅದರ ಎಸ್ಟಿಮೇಟನ್ನು ಮತ್ತೆ ರಿವೈಜ್ ಮಾಡಬೇಕಾಯಿತು. ಆದ್ದರಿಂದ ಆ ಕೆಲಸವನ್ನು ಮಾಡುವುದು ಸ್ವಲ್ಪ ತಡವಾಯಿತು.

ಶ್ರೀ ಜಿ. ಟಿ. ರಂಗಪ್ಪ.—ಸೋಮನಾಥಪುರದ ಕೆರೆಯನ್ನು ದುರಸ್ತು ಮಾಡಬೇಕೆಂದು ಅಲ್ಲಿನ ಜನಗಳಿಂದ ಮನವಿಗಳು ಬಂದಿರುವುದು ನಿಜವೇ ?

ಶ್ರೀ ಆಲೂರು ಹನುಮಂತಪ್ಪ.—ಅದು ಬಂದಿಲ್ಲ.

ಶ್ರೀ ಜಿ. ಟಿ. ರಂಗಪ್ಪ.—ಎಸ್ಟಿಮೇಟಾಯ್ತು ?

ಶ್ರೀ ಆಲೂರು ಹನುಮಂತಪ್ಪ.—ಕೋಡಿಹಳ್ಳಿದು ರೂ. 28,600. ದೇವಪುರದ್ದು ಇನ್ನೂ ಎಸ್ಟಿಮೇಟು ತಯಾರಾಗುತ್ತಾ ಇದೆ.

ಶ್ರೀ ಎಚ್. ಡಿ. ದೇವೇಗೌಡ.—1947ನೆ ಇಸವಿಯಲಾಗಾಯಿತು ಮನವಿ ಬಂದು 28 ಸಾವಿರ ರೂಪಾಯಿ ಖರ್ಚಿನಲ್ಲಿ ಒಂದು ಕೆರೆ ರಿಪೇರಿ ಮಾಡುವುದಕ್ಕೆ ಎಷ್ಟು ವರ್ಷ ಬೇಕು ? 17 ವರ್ಷ ಬೇಕೆ! ಒಂದು ಎಸ್ಟಿಮೇಟನ್ನು ಸ್ಕ್ರುಟಿನಿಮಾಡಿ ಮಂಜೂರುಮಾಡುವುದಕ್ಕೆ ? ಈ ಇಲಾಖೆಯಲ್ಲಿ ಸರ್ಕಾರಿ ಅಧಿಕಾರಿಗಳು ಎಷ್ಟು ಜನರಿದ್ದಾರೆ. ಈ ಇಲಾಖೆಗೆ ಒಬ್ಬ ಪ್ರತ್ಯೇಕ ಉಪಮಂತ್ರಿ ಇದ್ದಾರೆ. ಇದಕ್ಕೆ ಇನ್ನೆಷ್ಟು ಜನ ಬೇಕಾಗುತ್ತದೆ!

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸಭೆಗೂ ಗೊತ್ತಿದೆ. ಸದಸ್ಯರಿಗೂ ಗೊತ್ತಿದೆ, ಈ 40 ಕೆರೆಗಳ ಪರಿಸ್ಥಿತಿ ಏನಿತ್ತೆಂದು. ಅವು ರೆವಿನ್ಯು ಇಲಾಖೆಯಲ್ಲಿ ಮೇನ್‌ಚೇನ್ ಮಾಡಿದ ಕೆರೆಗಳು. ಇತ್ತೀಚೆಗೆ ಆಕ್ಟ್ ಪಾಸ್ ಮಾಡಿದ್ದೇವೆ. ತಾಲ್ಲೂಕು ಬೋರ್ಡಿಗೆ ವಹಿಸಿದಂಥ ಕೆರೆಗಳನ್ನು ಬಿಟ್ಟು, ಬಾಕೀದನ್ನು ಪಿ.ಡಬ್ಲು.ಡಿ. ವಹಿಸಿಕೊಂಡಿದೆ. ಇನ್ನುಮೇಲೆ ಕೆರೆ ಜವಾಬ್ದಾರಿ ಪಿ.ಡಬ್ಲು.ಡಿ.ಗೆ ಬರುತ್ತದೆ.

ಶ್ರೀ ಜಿ. ಟಿ. ರಂಗಪ್ಪ.—ರೆವಿನ್ಯು ಇಲಾಖೆ ಕೆರೆಗಳು ಬಹಳ ಇವೆ ಎಂದು ಮಾನ್ಯ ಉಪಮಂತ್ರಿಗಳು ಹೇಳಿದರು. ಅವು ರೆವಿನ್ಯು ಇಲಾಖೆ ಕೆರೆಗಳಾದರೂ ; ದುರಸ್ತಿ ಕಾರ್ಯ ಪಿ.ಡಬ್ಲ್ಯೂ.ಡಿ. ಇಲಾಖೆಗೆ ಸೇರಿದ್ದು ಎಂದು ಮಾನ್ಯ ಉಪಮಂತ್ರಿಗಳು ಮರೆತಿರಬೇಕು. 1947ನೆ ಇಸವಿಲಾಗಾಯಿತು ಮನವಿಗಳು ಬರುತ್ತಾ ಇದ್ದರೂ ಕೂಡ, ಈ ಕಾರ್ಯ ಸುಮಾರು 17 ವರ್ಷಗಳಿಂದ ಆಗದೆ ಹೋಗಿರುವುದರಿಂದ, ಈ ಇಲಾಖೆ ಇದೆಯೇ ? ಅಥವಾ ಇಲ್ಲ ಎಂದು ಭಾವಿಸೋಣವೆ ?

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ಜ್ಞಾಪಿಸಿಕೊಳ್ಳಬೇಕು, ರೆವಿನ್ಯು ಅಧಿಕಾರಿಗಳೇ ದುರಸ್ತಿ ಕೆಲಸವನ್ನು ಮಾಡಿಸುತ್ತಾ ಇದ್ದರು ಪಟೇಲ-ತಾನುಭೋಗರು ಅಚ್ಚುಕಟ್ಟುಗಾರರ ದೃಷ್ಟಿಯಿಂದ, ವಾರದ ಜನರನ್ನು ಬಿಟ್ಟು ಕೆಲಸ ಮಾಡಿಸುತ್ತಾ ಇದ್ದರು. ಕೆರೆ ಒಡೆದು ಹೋದಾಗ ಅಥವಾ ಕೆಟ್ಟು ಹೋದಾಗ ಮಾತ್ರ ಪಿ.ಡಬ್ಲ್ಯೂ.ಡಿ. ಯವರು ರಿಪೇರಿ ಮಾಡುತ್ತಾ ಇದ್ದರು, ಸಹಾಯವನ್ನು ಕೊಡುತ್ತಾ ಇದ್ದರು.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಅದು ಪೂರ್ವಕಾಲದ ಮಾತು. ಇತ್ತೀಚೆಗೆ ಪಿ.ಡಬ್ಲ್ಯೂ.ಡಿ. ಯವರೇ ಎಲ್ಲಾ ಕೆರೆ ಕೆಲಸ ಮಾಡಿಸುತ್ತಾ ಇದ್ದಾರೆ. ಒಂದು ಸಣ್ಣ ಕೆರೆಯ ರಿಪೇರಿಯನ್ನು ಸ್ಕೃಟಿನಿಮಾಡಿ ಸ್ಯಾಂಕ್ಷನ್ ಆಗಬೇಕಾದರೆ 17 ವರ್ಷ ಬೇಕಾದರೆ, ಇನ್ನು ಸಣ್ಣ ನೀರಾವರಿ ಕೆಲಸ ಎಷ್ಟು ತ್ವರಿತವಾಗಿ ನಡೆಯುತ್ತಿರಬಹುದೆಂದು ತಮ್ಮ ಗಮನಕ್ಕೆ ಬಂದಿದೆಯೇ? ಇದು ಮುಖ್ಯವಾಗಿ ಜನರಿಗೆ, ಆಹಾರಕ್ಕೆ ಸಂಬಂಧಪಟ್ಟಿದ್ದು.

ಶ್ರೀ ಆಲೂರು ಹನುಮಂತಪ್ಪ.—ಈ ಕೆರೆ ಅಂಗಳ ಹೂತು ಹೋಗಿ ಉಳಿಮೆಗೆ ತಕರಾರು ಇತ್ತು. ಈಗ ಆಕ್ಟ್ ಪಾಸ್ ಆಗಿದೆ. ಪಿ. ಡಬ್ಲ್ಯೂ. ಡಿ.ಗೆ ಸಂಪೂರ್ಣ ಅಧಿಕಾರ ಬಂದಿದೆ. ಇನ್ನು ಮುಂದೆ ಜಾಗ್ರತೆ ಮಾಡುತ್ತೇವೆ.

Government High School at K. G. F.

*Q.—469. Sri S. RAJAGOPAL (K. G. F.).—

Will the Government be pleased to state :—

(*a*) whether they have received any representations from the various organisations and the public of K. G. F. requesting to start a Government High School at Kolar Gold Fields;

(*b*) if so, the action taken in this regard ?

A.—Sri S. R. KANTHI (Minister for Education).—

(*a*) One representation was received by the Director of Public Instruction.

(*b*) Starting of a Government High School was not considered necessary as a private organisation came forward to open a High School.

Sri S. RAJAGOPAL.—May I know whether representations were received by Government for starting a Government High School ?

Sri S. R. KANTHI.—Government received two sets of applications one for starting a private High school and another for starting a Government high school.

Sri S. RAJAGOPAL.—Is it not a fact that when the Hon'ble Minister visited K. G. F. even the local Congress party members represented the need for a Government high school ?

Sri S. R. KANTHI.—It is true that some prominent people from the area saw me and represented that Government should start a high school.